Licence No. 60.
Licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೫೦ | ತಾರೀಕು ೭-೮-೧೯೫೯ನೇ ಶುಕ್ರವಾರ | ಸಂಚಿಕೆ ೧೫

"ಸಿ" ಸಂಸ್ಥಾನಗಳ ಸುಧಾರಣಾ ಮಸೂದೆ

ಕೇಂದ್ರ ಶಾಸನ ಸಭೆಯಲ್ಲಾದ ಚರ್ಚೆ.

ಕಳೆದ ತಾರೀಕು ೨೫ ರಲ್ಲಿ ಕೇಂದ್ರ ಶಾಸನ ಸಭೆಯಲ್ಲಿ 'ಸಿ' ಸಂಸ್ಥಾನಗಳಿಗೆ ಸುಧಾರಣೆಯನ್ನು ಕೊಡಮಾಡಿ ಮಸೂದೆಯನ್ನು ಸಂಸ್ಥಾನಗಳ ಮಂತ್ರಿಯವರಾದ ಶ್ರೀ. ಗೋಪಾಲಸ್ವಾಮಿ ಐಯ್ಯಂಗಾರರು ಮಂಡಿಸಿದರು. ಈ ಮಸೂದೆಯ ವ್ಯಾಪ್ತಿಗೆ ಬಿಲಾಸಪುರ, ಕಚ್, ಮಣಿಪುರ, ಮತ್ತು ತ್ರಿಪುರ ಈ ಸಂಸ್ಥಾನಗಳನ್ನು ಬಿಟ್ಟು ಉಳಿದ ಸಂಸ್ಥಾನಗಳಿಗೆ ಶಾಸನ ಸಭೆ ಮತ್ತು ಮಂತ್ರಿ ಮಂಡಳಿಗಳನ್ನು ಕೊಡುವ ಏರ್ಪಾಡಿವೆ ಈ ಮಸೂದೆಯನ್ನು ಸಭೆಯು ಮಂಡಿಸುತ್ತಾ ಈ ಮಸೂದೆಯು 'ಸಿ' ಪ್ರಾಂತಗಳಿಗೆ ಜವಾಬ್ದಾರಿ ಸರಕಾರ ಕೊಡುವದ ದರೂ ಈ ಸುಧಾರಣೆಗಳು 'ಎ' ಮತ್ತು 'ಬಿ' ಪ್ರಾಂತಗಳ ಸುಧಾರಣೆಯಂತಿಲ್ಲ. ಅವುಗಳಂತಾಗಿದ್ದರೆ .ಈ ಪ್ರಾಂತಗಳ ಚೀಫ್ ಕಮಿಷನರು ಗವರ್ನರರಂತೆ ಘಟನಾತ್ಮಕ ಅಧಿಕಾರಿಯಾಗಿರುತ್ತಿದ್ದರು. ಆದರೆ ಈ ಮಸೂದೆಯಲ್ಲಿ ಚೀಫ್ ಕಮಿಷನರಿಗೂ ಆಡಳಿತದಲ್ಲಿ ಅಧಿಕಾರವಿದೆ ಎಂದರು. ಮತ್ತೆ ಮುಂದರಿಯುತ್ತಾ ಈ ಸಂಸ್ಥಾನಗಳ ಬಗ್ಗೆ ಅವಶ್ಯತೋರಿದಾಗ ಕೇಂದ್ರ ಸರಕಾರವು ನಿಯಂತ್ರಣ ಹಾಗೂ ನಿರ್ದೇಶನಗಳನ್ನು ಕೊಡಬಹುದಾಗಿದೆ. ಅಜಮೀರ್ ಕೊಡಗು ಮತ್ತು ಬೋಪಾಲ್‌ಗಳಂಥಾ ಚಿಕ್ಕ ಪ್ರಾಂತಗಳಿಗೂ ಈ ಸುಧಾರಣೆ ಕೊಡುವ ವಿಚಾರದಲ್ಲಿ ವಿರೋಧಾಭಿಪ್ರಾಯಗಳಿರುವದು ನನಗೆ ತಿಳಿದಿದೆ. ಬೋಪಾಲ್ ಮತ್ತು ಅಜಮೀರ್‌ಗಳಿಗೆ ಜವಾಬ್ದಾರಿ ಸರಕಾರ ಕೊಡಬೇಕೆಂಬುದು ಆ ಸಂಸ್ಥಾನಗಳ ವಿಲೀನೀಕರಣಕ್ಕೆ ತಡೆಯೆಂದು ಯಾರೂ ಭಾವಿಸಕೂಡದು. ಬೋಪಾಲಿನ ವಿಚಾರದಲ್ಲಿ ಐದು ವರ್ಷಗಳ ವರೆಗೆ ಅದನ್ನು ವಿಲೀನಗೊಳಿಸಲಾಗುವದಿಲ್ಲವೆಂದು ಅದರ ಅರಸರೊಡನೆ ಮಾಡಿಕೊಂಡ ಒಪ್ಪಂದವು ಇಂದು ಅತಂಕವಾಗಿದೆ. ಆದರೆ ವಿಲೀನೀಕರಣಕ್ಕೆ ಅರಸರನ್ನು ಒಪ್ಪಿಸುವ ಪ್ರಯತ್ನ ನಡೆಯುತ್ತಿದೆ. ಬೋಪಾಲ್ ಮತ್ತು ಅಜಮೀರ್‌ಗಳ ಜನರೆಲ್ಲರೂ ವಿಲೀನೀಕರಣಕ್ಕೆ ತಯಾರಿರುವರೆಂಬುದು ನಿಶ್ಚಯವಾಗಿಲ್ಲ. ಕೊಡಗಿನ ವಿಷಯವಾಗಿ ಮಾತ್ರ ಕೊಡಗನ್ನು ಈ ಮಸೂದೆಯಿಂದ ವಿನಾಯಿಸಿ ಮೈಸೂರಿನೊಡನೆ ವಿಲೀನಗೊಳಿಸಬೇಕೆಂದು ಸೂಚಿಸಿದರು

ಶ್ರೀ. ವಿ. ಸರ್ವಾಟಿಯವರು ತಿದ್ದುಪಡಿಯನ್ನು ಸಮರ್ಥಿಸಿ ಅಜಿಮೀರ್, ಬೋಪಾಲ್, ಕೊಡಗು ಗಳಂಥಾ ಚಿಕ್ಕ ಸಂಸ್ಥಾನಗಳನ್ನು ಮಸೂದೆಯಿಂದ ವಿನಾಯಿಸಿ ತಮ್ಮ ಕಾಲಲ್ಲಿ ನಿಲ್ಲಬಲ್ಲ ದೊಡ್ಡ ಸಂಸ್ಥಾನಗಳಿಗೆ ಮಾತ್ರ ಈ ಮಸೂದೆಯನ್ನು ಅನ್ವಯಿಸಬೇಕೆಂದರು.

ಶ್ರೀ ಸಿ. ಎಂ. ಪೂಣಚ್ಚನವರು ಸಿದ್ವಾರವರ ತಿದ್ದುಪಡಿಯನ್ನು ವಿರೋಧಿಸಿ ಆ ತಿದ್ದುಪಡಿಯು ಅಜಮೀರ್ ಬೋಪಾಲ್‌ಗಳನ್ನು ಚೀಫ್ ಕಮಿಷನರ ನಿರಂಕುಶ ಆಡಳಿತಕ್ಕೆ ತರುವಂಥಾದ್ದಾಗಿದೆಯೆಂದರು.

ಗೃಹ ಮಂತ್ರಿ ರಾಜಗೋಪಾಲಾಚಾರಿಯವರು ಮಧ್ಯದಲ್ಲಿ ಬಾಯಿ ಹಾಕಿ "ಭಾಷಾವಾರು ಮೂರು ಒಂದಾದರೆ ಸ್ವಮತ ಮಂಡನೆಯು ಹೊತೇ ಬೇರೆ. ಭಾಷಾವಾರು ಭ್ರಾಂತತೆಯನ್ನು ಹದಗೊಳಿಸಿಕೊಳ್ಳಬೇಕು. ಯೋಗ್ಯವಾದ ಆಡಳಿತ ನಡೆಸಲು ಸಹಾಯಕವಾದ ಸಾಧನಗಳಲ್ಲಿ ಭಾಷೆ ಒಂದಾಗಿದೆ ಕೇವಲ ಭಾಷೆಯ ಕಾರಣದಿಂದ ಒಬ್ಬರು ವಿಲೀನೀಕರಣದ ಬಗ್ಗೆ ಆತುರಪಡಬಾರದು ಇದರಿಂದ ಯಾವ ರೀತಿಯ ತೊಂದರೆಗಳುಂಟಾಗುವವೆಂಬುದಕ್ಕೆ ತಿರುವಾಂಕೂರು—ಕೊಚಿನ್‌ಗಳು ಉದಾಹರಣೆಯಾಗಿದೆ. ಮುನವಳ್ಳಿಯವರು ಇಂದಿನ ಪರಿಸ್ಥಿತಿಯಲ್ಲಿ ಪ್ರತ್ಯೇಕ ಕೊಡಗನ್ನು ಇನ್ನು ವರ್ಷಗಳ ವರೆಗೆ ಸಹಿಸಲು ಶಕ್ತರಾಗಿದ್ದರೆ ಇನ್ನೂ ಸುಧಾರಿತ ಸ್ಥಿತಿಯಲ್ಲಿ ಅದರ ಪ್ರತ್ಯೇಕತೆಯನ್ನು ಸಹಿಸಲು ಶಕ್ತರಾಗಬೇಕು ಮುಂದೆ ಎಂದಾದರೂ ಈ ಭಾಗಗಳು ನೆರೆಯ ಪ್ರಾಂತಗಳೊಡನೆ ವಿಲೀನವಾಗಬೇಕೆನ್ನುವದಾದರೆ ಈ ಮಸೂದೆಯು ಅದಕ್ಕೆ ಅಡ್ಡವಾಗಲಾರದು." ಎಂದರು.

ಪಂಡಿತ ಹೃದಯನಾಥ ಕುಂಜ್ರುರವರು ಮಾತಾಡುತ್ತಾ ಈ ಭಾಗಗಳಿಗೆ ಜವಾಬ್ದಾರಿ ಸರಕಾರ ಕೊಡುವದಕ್ಕೆ ತಾನು ವಿರೋಧವಿಲ್ಲವೆಂದೂ ಆದರೆ ಈ ಚಿಕ್ಕ ಭಾಗಗಳಲ್ಲಿ ಉತ್ತಮವಾದ ಹಾಗೂ ಬಲಯುತವಾದ ಮಂತ್ರಿಮಂಡಳದ ಸಾಧ್ಯವಿದೆಯೋ ಎಂಬ ಸಂಶಯ ವ್ಯಕ್ತಪಡಿಸಿದರು.

ಚರ್ಚೆಗೆ ಉತ್ತರವೀಯುತ್ತಾ ಗೋಪಾಲಸ್ವಾಮಿ ಐಯ್ಯಂಗಾರರು ಹೀಗೆ ಹೇಳಿದರು. "ಈ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ಅರ್ಧ ಕೋಟಿ ರೂಪಾಯಿ ಹೆಚ್ಚಿಗೆ ವೆಚ್ಚವಾಗುವದು. ಈ ಹಣವು ಅತ್ಯುತ್ತಮವಾದ ರೀತಿಯಲ್ಲಿ ಖರ್ಚಿನ್ನಬಹುದು. ಏಕೆಂದರೆ ಈ ಭಾಗದ ಜನರು ಈ ಸುಧಾರಣೆಗಾಗಿ ಹಾತೊರೆಯುವದಲ್ಲದೆ ಅವರ ಇಂದಿನ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಇದು ಸಹಾಯಕವಾಗುವದೆ'ಂದು ಹೇಳಿದರು. ನಂತರ ಮಸೂದೆಯು ಪಾಸಾಯಿತು.

ದಿ ಬಾಂಬೆ ಮ್ಯೂಚುಯಲ್ ಲೈಫ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

12-9 [ಸ್ಥಾಪಿತ 1871]

ಭಾರತದಲ್ಲಿನ ಅತ್ಯಂತ ಹಳೆಯ ವಿಮಾ ಸಂಸ್ಥೆ.

ಉತ್ಸಾಹಶಾಲಿ ಯುವಕರಿಗೆ ಸಂಬಳ ಯೂ ಕಮಿಶನ್ ಮೇಲೆ ಪ್ರತಿನಿಧಿಗಳಾಗಲು ಅವಕಾಶವಿದೆ.

ವಿವರಗಳಿಗೆ:—ದಿ. ಬ್ರಾಂಚ್ ಸೆಕ್ರೆಟರಿ,
172-173, ನರಸಿಂಹರಾಜರೋಡು, ಬೆಂಗಳೂರು 2.

ಮೂರಾಟಕ್ಕಿದೆ.

ಪೊನ್ನಂಪೇಟೆಯ ರುದ್ರಬೀಡು ಗ್ರಾಮದಲ್ಲಿ ನನ್ನ ಅನುಭವದ 15 ಎಕರೆ ಜಹಗೀರ್ ಭೂಮಿ ಮತ್ತು ಅದಕ್ಕೆ ಒತ್ತಾದ 25 ಚಿಲ್ಲರೆ ಎಕರು ಬಾಣೆ, ಈ ಬಾಣೆ ಜಾಗದಲ್ಲು 200 ಫಸಲಿಗೆ ಬಂದ ಕಿತ್ತಳೆ ಗಿಡ, 30 ಫಸಲಿಗೆ ಬಂದ ಅಡಿಕೆ ಗಿಡ, ಫಸಲಿಗೆ ಬರಲಿರುವ 8 ತಿಂಗಿನ ಗಿಡ, ಫಸಲಿಗೆ ಬಂದಿರುವ 4 ಹುಣುಸೆ ಮರ ಮತ್ತು ಸದರಿ ಭೂಮಿ ಕರೆಯಲ್ಲಿ ಹುಲ್ಲು ಹಾಕಿದ ಮೂರು ಕೋಣೆಯ ಒಂದು ವಾಸದ ಮನೆ, ಅಂದಾಜು ಅರುವತ್ತು ರಾಸುದನಗಳನ್ನು ಕಟ್ಟತಕ್ಕ ಕೊಕೋಲು, ಬಾರಿ, ಹಂಚು ಹಾಕಿದ ಒಂದು ಗೋಡೆ ಇರುವ ಕೊಟ್ಟಿಗೆ, ಈ ಬಾಣೆಯ ಸುತ್ತು ಮೂರು ಲೈನು ಹಾಕಿದ ತಂತಿ ಬೇಲಿ ಸಹ ಹಾಕಿವೆ ಆಸ್ತಿ ಮೂರಾಟಕ್ಕಿದೆ. ಈಗ ಭೂಮಿಯಲ್ಲಿ ಅಂದಾಜು 13 ಗಾಡಿ ಭತ್ತ ಗುತ್ತಿಗೆ ವಾರ ಸಿಕ್ಕುತ್ತದೆ. ಭೂಮಿ ಒಳ್ಳೆಯ ನೀರಾವರಿಯು ಸೊತ್ತಾಗಿದೆ. ಈ ಆಸ್ತಿಯು ಬಾಳೆಲೆಗೆ ಹೋಗುವ ಕಲ್ಲು ಹಾಕಿದ ರಸ್ತೆಯಿಂದ ಮುಕ್ಕಾಲು ಮೈಲು ದೂರದಲ್ಲಿದೆ. ಆಸ್ತಿಗೆ ಲಾರಿ, ಕಾರ್, ವಗೈರೆ ವಾಹನಗಳು ಹೋಗಲು ಯೋಗ್ಯ ರಸ್ತೆ ಇದೆ. ಖಾಯಿಸ್ದಾರರು ಈ ಆಸ್ತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ವಿವರ ತಿಳಿದುಕೊಳ್ಳಬಹುದು. ಈ ಆಸ್ತಿಗೆ ಅಂದಾಜು ಮೂವತ್ತೈದು ಸಾವಿರ ರೂಪಾಯಿ ಬೆಲೆ ಕಟ್ಟಲ್ಪಟ್ಟಿದೆ.

ಎರಡನೇ ಪೊನ್ನಂಪೇಟೆ ನಾಡು ಹೆಬ್ಬಾಲೆ ಗ್ರಾಮದಲ್ಲು ನನ್ನ ಅನುಭವದ 25 ಚಿಲ್ಲರೆ ಎಕರು ಜಾಗದಲ್ಲು ಕಿತ್ತಳೆ ಫಸಲಿಗೆ ಬಂದು ಈ ವರ್ಷ 3750/- ರೂ. ಗಳಿಗೆ ಗುತ್ತಿಗೆ ಕೊಟ್ಟಿರುವ ಒಂದು ಕಿತ್ತಳೆ ತೋಟ. ಈ ತೋಟವು ತಿತಿಮತಿ ಒಂಟಿಯಂಗಡಿಯ ರಸ್ತೆಯಿಂದ ಎರಡು ಮೈಲು ದೂರದಲ್ಲಿದೆ. ಲಾರಿ ಮತ್ತು ಕಾರು ಹೋಗಲು ಯೋಗ್ಯವಾದ ರಸ್ತೆ ಇದೆ. ಇದಕ್ಕೆ ಅಂದಾಜು ರೂ. ೪೫,೦೦೦/- ಕ್ರಯ ಕಟ್ಟಲಾಗಿದೆ. ಮೂರಾಟಕ್ಕೆ ಲಾಯಕ್ಕಾದ ಬೀಟ್, ಮತ್ತು ಮತ್ತಿ ಮರಗಳು ಸಹ ಇದೆ

ಖಾಯಿಸುದಾರರು ಪತ್ರ ಮೂಲಕವಾಗಲಿ ಯೂ ಖುದ್ದು ಬಂದು ನೋಡಿ ಎಲ್ಲಾ ವಿಷಯ ತೀರ್ಮಾನ ಮಾಡಿಕೊಳ್ಳಬಹುದು.

ಪೊನ್ನಂಪೇಟೆ
೩೦-೪-೫೯

ಚೆಪ್ಪುಡೀರ ಎ. ಪೊನ್ನಪ್ಪ,
ಬಟ್ಟೆ ವ್ಯಾಪಾರಿ,
ಪೊನ್ನಂಪೇಟೆ.

ಕಾಂಗ್ರೆಸ್ಸಿನಲ್ಲೆದ್ದಿರುವ ಸುಂಟರ ಗಾಳಿ

ಬಹಳ ಕಾಲದಿಂದ ಕಾಂಗ್ರೆಸ್ಸಿನೊಳಗಿದ್ದ ಮತಭೇದದ ಮೂಲಕಾರಣಗಳು ಈಗ ಬೆಳಕಿಗೆ ಬರಹತ್ತಿವೆ ಕಳೆದ ವಾರದಲ್ಲಿ ನೆಹೆರೂರವರ ರಾಜಿನಾಮೆಯು ನಿಮಿತ್ತ ಕೊಟ್ಟ ಹೇಳಿಕೆಯೂ, ಪಾರ್ಲಿಮೆಂಟು ಕಾಂಗ್ರೆಸ್ಸಿಗರು ನೆಹರೂರವರ ಧುರೀಣತ್ವಕ್ಕೆ ತನ್ನು ಸಹಾನುಭೂತಿ ವ್ಯಕ್ತಪಡಿಸಿದ ಘೋರಣೆಯೂ ಕಾಂಗ್ರೆಸ್ಸಿನೊಳಗಿನ ಇಬ್ಬಣಗಳನ್ನು ಸ್ಪಷ್ಟೀಕರಿಸುತ್ತದೆ. ಕಾಂಗ್ರೆಸ್ ಅಧ್ಯಕ್ಷ ಟಾಂಡನರು ಕರ್ನಾಟಕ ಪ್ರವಾಸ ಕೈಕೊಳ್ಳುವಾಗ ತೇ ದಿಲ್ಲಿಯಲ್ಲಿ ಗುಲ್ಲೆದ್ದಿತು. ಇಂದಿನ ಪರಿಸ್ಥಿತಿಯಲ್ಲಿ ನೆಹರೂರವರೊಬ್ಬರೇ ಕಾಂಗ್ರೆಸ್ಸಿನಲ್ಲಿ ಐಕ್ಯವನ್ನು ಸಾಧಿಸಬಲ್ಲರೆಂದು ನಾವು ಕಳೆದ ಬಾರಿ ಸೂಚಿಸಿದ್ದೆವು. ಅಂತಲೇ ಕಾಂಗ್ರೆಸ್ ಕಾರ್ಯಕರ್ತರು ಅವರ ಮುಂದಾಳುತನಕ್ಕೆ ಸರ್ವಾನುಮತದ ಸ್ವಾಗತವನ್ನಿತ್ತಿರುವರು. ಟಾಂಡನರೂ ಅವರ ಅನುಯಾಯಿಗಳೂ ನೆಹೆರೂರವರ ಧೋರಣೆಗೆ ಸಂಪೂರ್ಣವಾಗಿ ಪ್ರತಿಕೂಲರಾಗಿದ್ದಾರೆನ್ನುವುದಕ್ಕೆ ಈಚೆಗೆ ಕಾಂಗ್ರೆಸ್ಸಿನಲ್ಲಿ ಉದ್ಭೂತವಾದ ನೂತನ ಸಮಸ್ಯೆಗಳೇ ಸಾಕ್ಷಿ ಕೊಡುತ್ತವೆ.

ಉತ್ತರ ಪ್ರದೇಶದ ಮಾಜೀ ರಕ್ಷಣಾ ಖಾತೆಯ ಮಂತ್ರಿ ಶ್ರೀ ವಿಶ್ವರವರು ನೆಹರೂರವರ ನಿರಂಕುಶ ಪ್ರಭುತ್ವದ ಧೋರಣೆಯನ್ನು ಖಂಡಿಸಿ ಒಂದು ಹೇಳಿಕೆಯನ್ನಿತ್ತಿರುವರು. ಕಾಂಗ್ರೆಸ್ಸಿನ ಮೂಲ ಭೂತ ಹಕ್ಕುಗಳಿಗೆ ವಿರುದ್ಧವಾಗಿ ವರ್ತಿಸಿ ಒಬ್ಬ ವ್ಯಕ್ತಿಗೆ ಸರ್ವಾಧಿಕಾರವನ್ನು ವಹಿಸಿಕೊಡುವದೂ, ಆತನಿಗೆ ವ್ಯಕ್ತಿ ಪೂಜೆ, ಸಲಿಸುವದೂ ಕಾಂಗ್ರೆಸ್ಸಿನ ಗೌರವಕ್ಕೆ ಕುಂದು ಮಾತ್ರವಲ್ಲದೆ ಇದಕ್ಕಿಂತ ಮಿಗಿಲಾದ ಅನೈತಿಕ ಕಾರ್ಯ ಬೇರಿಲ್ಲವೆಂದು ಆರೋಪ ಮಾಡಿದ್ದಾರೆ. ಅಂಥಾ ಕಾರ್ಯಕ್ಕೆ ಮುಖ್ಯ ಮಂತ್ರಿಗಳಾದ ನೆಹರೂರವರೇ ಪ್ರತ್ಯಕ್ಷವಾಗಿ ತನ್ನ ಸಮ್ಮತಿಯನ್ನಿತ್ತದ್ದು ಸೋಜಿಗದ ಸಂಗತಿಯೆಂದೂ ಹೇಳಿರುವರು. ನೆಹರೂರವರ ವ್ಯಕ್ತಿತ್ವ ಹಾಗೂ ಧೋರಣೆಯ ಮೇಲೆ ಈ ಬಗೆಯ ಖಂಡತುಂಡ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಮಿಶ್ರರ ಕಾರ್ಯ ಸಾಹಸವೇ ಸರಿ! ಜಾತೀಯ ಸಂಕುಚಿತ ಮನೋವೃತ್ತಿಯವರ ಆದೇಶದಂತೆ ರಾಜಕೀಯ ಸೂತ್ರವನ್ನು ತಿದ್ದುವುದರಿಂದ ಜಾಗತಿಕರಂಗದಲ್ಲಿ ಭಾರತವು ತನ್ನ ನೈತಿಕತೆಯನ್ನು ಕಳೆದುಕೊಂಡು ಆತ್ಮಘಾತುಕ ಕಾರ್ಯವನ್ನು ಮಾಡಿಕೊಂಡಂತಾಗುವುದನ್ನು ಮಿಶ್ರರು ಮರೆತಿದ್ದಾರೆ. ಅಷ್ಟು ಮಾತ್ರವಲ್ಲದೆ ಜವಾಹರಲಾಲ ನೆಹರೂ ಹಾಗೂ ದಿ. ಸರದಾರ ವಲ್ಲಭಾಯಿ ಪಟೇಲರವರೊಳಗೆ ಭಿನ್ನಾಭಿಪ್ರಾಯಗಳಿದ್ದು ಪಟೇಲರು ಟಾಂಡನರ ವ್ಯಕ್ತಿತ್ವ, ವೈಶಿಷ್ಟ್ಯತೆಯನ್ನು ಎತ್ತಿ ಹಿಡಿದಿದ್ದರೆಂದೂ ನೆಹರೂರವರೀಗ ಕಾಂಗ್ರೆಸ್ಸಿನ ಅಧ್ಯಕ್ಷನ ಆದೇಶವನ್ನು ಕಡೆಗಣಿಸಿ ಸರ್ವಾಧಿಕಾರತ್ವದ ಪ್ರದರ್ಶನವನ್ನು ತೋರಿಸುತ್ತಿದ್ದಾರೆಂದೂ ಟೀಕೆ ಮಾಡಿರುತ್ತಾರೆ. ನೆಹರೂರವರು ಸೂಚ್ಯವಾಗಿ ಪಟೇಲರಿಗೂ ತನಗೂ ಇದ್ದ ಸಂಬಂಧವನ್ನು ತನ್ನ ಹೇಳಿಕೆಯಲ್ಲಿ ವ್ಯಕ್ತಪಡಿಸಿರುವರು. ಶ್ರೀ ಡಿ. ಪಿ. ಮಿಶ್ರರವರು ನೆಹರೂ ಹಾಗೂ ಅವರ ಅನುಯಾಯಿಗಳು ಟಾಂಡನರ ಮೇಲೆ ಅದೇ ವೈರವನ್ನು ಸಾಧಿಸುತ್ತಿರುವದರಿಂದ ತಾನು ಹೊರಗೆ ಬಂದು ಜನರನ್ನು ಸಂಘಟಿಸಿ ಇಂಥಾ ಅಕ್ರಮಗಳನ್ನು ತಡೆಯಲು ಯತ್ನಿಸುತ್ತೇನೆಂದಿರುವರು. ನೆಹರೂರವರ ಬಗ್ಗೆ ಇಷ್ಟು ಕಟ್ಟುಗ್ರ ನೀತಿಯನ್ನು ತಾಳಿದವರಾರೂ ಇಲ್ಲ. ಅಂತೆಯೆ ತಿರುಗಿ ಸೆಪ್ಟೆಂಬರಿನಲ್ಲಿ ದಿಲ್ಲಿಯಲ್ಲಿ ಜರಗಲಿರುವ ಏ. ಐ. ಸಿ. ಸಿ. ಯಲ್ಲೇನು ನಡೆಯುತ್ತದೆಂಬುವುದು ಕುತೂಹಲದಾಯೀ ವಿಚಾರ. ಟಾಂಡನರು ನೆಹರೂರವರು ರಾಜಿನಾಮೆಯನ್ನು ಹಿಂದೆ ತೆಗೆದುಕೊಳ್ಳುವಂತೆ ಕಾರ್ಯಕಾರಿ ಸಮಿತಿಯ ಮೂಲಕ ಕೇಳಿಕೊಳ್ಳಬಹುದು. ನೆಹರೂ ಕಾರ್ಯ ಸಮಿತಿಯ ಪುನರ್ಘಟನೆಯ ಹೊರತು ಹಿಂದಕ್ಕೆ ತೆಗೆದುಕೊಳ್ಳುವದಿಲ್ಲ. ಟಾಂಡನರು ಪುನರ್ಘಟನೆಗೆ ಒಪ್ಪದ ಕಾರಣ ಅಲ್ಲಿ ಬಿಕ್ಕಟ್ಟು ತಲೆದೋರುವದು ಅನಿವಾರ್ಯ!

ಏ. ಐ. ಸಿ. ಸಿ. ಕೂಡುವಲ್ಲಿ ನೆಹರೂರವರ 'ಐಕ್ಯ' ಸಾಧನೆಗೆ ನೂರಕ್ಕೆ ೬೦ ರಷ್ಟು ಬಹುಮತ ಸಿಗುವದೆಂದು ಈಗಲೇ ಗೊತ್ತಾಗಿದೆ. ಆದುದರಿಂದ ನೆಹರೂ ಟಾಂಡನರೊಳಗೆ ಇರುವ ಈ ಜಗಳ ಮುಂದೆ ಹೇಗಾದೀತೆಂದು ನಾವು ಈಗಲೇ ಊಹಿಸುವದು ಅಶಕ್ಯವಾದರೂ ಟಾಂಡನರೇ ರಾಜಿಯಿತ್ತು ಹೊರಗೆ ಬರುವ ಸಂಭವವೇ ಹೆಚ್ಚೆಂದು ತೋರುತದೆ. ನೆಹರೂರವರು ಅಧ್ಯಕ್ಷಪದವನ್ನು ವಹಿಸುವುದಾದರೆ ತಾನು ರಾಜಿಯಾಗಿನೀಯಲು ಸದಾ ಸಿದ್ಧನೆಂದು ಟಾಂಡನರು ತನ್ನ ಸಂಚಾರಿ ಭಾಷಣವಲ್ಲಿ ವ್ಯಕ್ತಪಡಿಸಿರುವರು!

ಈ ಒಡಕು ಮುಖ್ಯತಃ ಇಬ್ಬರು ನಾಯಕರ ನಡುವೆ ಉಂಟಾಗಿದೆ. ಇಬ್ಬರೂ ಛಲವಾದಿಗಳು. ಈ ಪ್ರಕರಣದಿಂದ ನೆಹ್ರೂರವರಿಗೆ ಪಟ್ಟ ಕಟ್ಟುವದರಿಂದ ಒಂದು ಬಗೆಯ ಐಕ್ಯತೆ ಕಾಂಗ್ರೆಸ್ಸಿನಲ್ಲಿ ಕಂಡು ಬರಬಹುದು! ಕಾಂಗ್ರೆಸ್ಸಿನಿಂದ ಹೊರ ಹೋದ ಹಲವು ನೆಹ್ರೂ ವಿರೋಧಿಗಳು ತಿರುಗಿ ಒಳ ಬರಬಹುದು. ಆದರೆ ಟಾಂಡನ್ ಪಂಗಡದವರು ತಮಗಾಗಬಹುದಾದ ಮುಖ ಭಂಗದ ನೆಪದಲ್ಲಿ ಬೇರೆ ದಾರಿಯನ್ನು ಹಿಡಿಯಬಹುದೆಂದು ಮಿಶ್ರರವರ ಹೇಳಿಕೆಯಿಂದ ನಮಗರ್ಥವಾಗುವದು. ನೂತ್ರವಲ್ಲ; ಟಾಂಡನ್ ಮತ್ತು ಅವರ ಅನುಯಾಯಿಗಳಲ್ಲಿ ಕಾಂಗ್ರೆಸಿನ ಸಾಮ್ಯ ರೀತಿಯ ತತ್ವಕ್ಕೆ ವಿರುದ್ಧ, ಮನೋವೃತ್ತಿ ಬೆಳೆದಿರುವ ಪ್ರಯುಕ್ತ ಅವರು ಕ್ರಾಂತಿಯೇ ನೂರ್ಗವನ್ನು ಅನುಸರಿಸಬಹುದೇನೋ ಎಂದು ಭಾಸವಾಗುತ್ತದೆ. ಏಕೆಂದರೆ ಮಿಶ್ರಾರವರ ಪ್ರಾಂತೀಯ ಮುಖ್ಯ ಮಂತ್ರಿಯವರೊಡನೆ ತನ್ನ ವಿರೋಚನೆಗಾಗಿ ಬರೆದ ಪತ್ರದಲ್ಲಿ ಆ ಅಭಿಪ್ರಾಯವನ್ನು ಸೂಚ್ಯವಾಗಿ ಹೇಳಿದಂತಿದೆ.

ನೆಹ್ರೂರವರು ತನ್ನ ರಾಜಿನಾಮೆಯ ಕಾರಣಗಳನ್ನು ಸ್ಪಷ್ಟವಾಗಿ ಹೇಳದೆ ಹೋದರೂ ವಿದೇಶಾಂಗ ನೀತಿಯಮೇಲೆ ಟಾಂಡನ್ ಮತ್ತು ಅವರ ಅನುಯಾಯಿಗಳಿಗೂ ನೆಹರೂರವರಿಗೂ ತೀವ್ರ ಮತಭೇದವುಂಟಾಗಿದೆಯೆಂದು ಸ್ಪಷ್ಟವಾಗುತ್ತದೆ. ಇಬ್ಬರು ಧುರೀಣರಲ್ಲಿ ಯಾರಾದರೊಬ್ಬನನ್ನು ಉಳಿಸಿಕೊಳ್ಳಬೇಕೇ ಹೊರತು ಇಬ್ಬರನ್ನು ಕಾಂಗ್ರೆಸ್ ಉಳಿಸಿಕೊಳ್ಳಲಾಗದೆಂದು ವಿದಿತ ವಿಚಾರವೇ ನೆಹರು ಎಷ್ಟು ಛಲವಾದಿಯೋ ಟಾಂಡನ್ ಅಷ್ಟೇ ಹಟವುಳ್ಳವರು! ಇಬ್ಬರೂ ತಪ್ಪು ತಪ್ಪು ವಾದವನ್ನು ಬದಲಿಸದೆ ಇರುವವರಾದ್ದರಿಂದ ಇಬ್ಬರೊಳಗೆ ಐಕ್ಯ ಶಕ್ಯವಿಲ್ಲ. ಏ. ಐ. ಸಿ. ಸಿ. ಯ ೩೮೭ ಸದಸ್ಯರಲ್ಲಿ ೨೦೦ ಮಂದಿ ಸದಸ್ಯರು ನೆಹರೂರವನ್ನೇ ಕಾಂಗ್ರೆಸ್ ಗಾದಿಗೇರಿಸಬಹುದು. ಆರ್ಥಾತ್ ಸರ್ವಾಧಿಕಾರವನ್ನ ಅವರಿಗೆ ವಹಿಸಿಕೊಡಬಹುದ! ಕೊನೆಗಾದರೂ ಆಗುವುದು ಅಷ್ಟೇನೆ!

ನೆಹರೂರವರ ಧುರೀಣತ್ವಕ್ಕೆ ಸಂಪೂರ್ಣ ಬೆಂಬಲ ಸಹಕಾರ ಜನತೆಯಿಂದ ದೊರಕುವದೆನ್ನುವುದರಲ್ಲಿ ಸಂದೇಹವಿಲ್ಲ. ದೇಶದ ಗಂಭೀರ ಪರಿಸ್ಥಿತಿಯನ್ನರಿತುಕೊಂಡು ನಾವು ನೆಹರೂರವರ ಕೈಯ್ಯಲ್ಲಿ ಸರ್ವಾಧಿಕಾರಿತ್ವವನ್ನು ವಹಿಸಿಕೊಡುವದು ಸುಯೋಗ್ಯವೇ ಆಗಿದೆ. ಇದರಿಂದ ಸಹಜವಾದ ಪ್ರಜಾಸ್ವಭ ತ್ವವನ್ನು ಭಾರತಕ್ಕೆ ನೀಡಿದಂತಾಗಿಲ್ಲವೆಂದರೂ, ಸರ್ವಾಧಿಕಾರತ್ವವನ್ನು ನಾವಾಗಿಯೇ ಒಪ್ಪಿಸಿಕೊಟ್ಟಂತಾಯಿತಾದರೂ ನೆಹರೂರವರಿಗೆ ಅಧಿಕಾರವನ್ನು ಕೊಡುವದರಿಂದ ದೇಶಕ್ಕೆ ಅದರಿಂದ ಯಾವ ಬಗೆಯು ಕೇಡೂ ಆಗದೆ ಸ್ಥೈರ್ಯವೇ ಆದೀತೆನ್ನುವದರಲ್ಲಿ ಸಂದೇಹವಿಲ್ಲ. ಜಾತೀಯತೆ-ಸ್ವಾರ್ಥ ಸಂಕುಚಿತತೆಗಳಿಂದ ರಾಜಕೀಯ ಸಂಧಾರಣೆ ಮಾಡುತ್ತೇವೆನ್ನುವದು ಸ್ವಪ್ನದ ಮಾತೇ ಸರಿ! ಅರ್ಧ ಶತಮಾನದಿಂದ ಕಾಂಗ್ರೆಸ್ ಆಚರಿಸುತ್ತಾ ಒಂದಿರುವ ಮೂಲ ತತ್ವಕ್ಕೆ ಅದು ಕಠಾರಪ್ರಾಯವಾದೀತು! ಅಂತಲೇ ನೆಹರೂರವರೇ ನಮ್ಮ ನಚ್ಚಿನ ಧುರೀಣರೆಂಬುದು ಜನಬಯಸಿ ಆಹ್ವಾನವನ್ನೀಯುತ್ತಲಿದೆ!

'ನಯ ಗ'

ಶ್ರೀ ವೆಲ್ಲಯ್ಯ ಗೌಂಡರ್—

ಭತ್ತ ಬೆಳೆಸುವವರಲ್ಲಿ ಅಗ್ರಗಣ್ಯ

ಸೇಲವಿನ ಶ್ರೀ. ವೆಲ್ಲಯ್ಯಗೌಡರು ಎಂಬವರು ತನ್ನ ಒಂದು ಏಕರು ಜಮೀನಿನಲ್ಲಿ ೧೨,೦೦೦ ಪೌಂಡಿನಷ್ಟು ಭತ್ತವನ್ನು ಬೆಳೆದ ವಿಶಯು ನಮ್ಮ ಅವಗಾಹನೆಗೆ ಬಂದಿರಬಹುದು. ೧೨,೦೦೦ ಪೌಂಡು ಭತ್ತ ಅಂದರೆ ನಮ್ಮ ದೇಶದ ಒಂದು ನೂರು ಭಟ್ಟ ಭೂಮಿಯಲ್ಲಿ ಮುನ್ನೂರು ಬಟ್ಟ ಭತ್ತ ಬೆಳೆದಂತಾಯಿತು. ಈ ಮಾತನ್ನು ಕೇಳಿದಾಕ್ಷಣ ನಮ್ಮಲ್ಲಿ ಅನೇಕರು ಈ ವಿಶಯ ಖಂಡಿತಾ ನಿಜವಾಗಿರಲಾರದೆಂದು ಹೇಳಲು ಹಿಂಜರಿಯಬಹುದು. ಆದರೆ ಈ ತಿಂಗಳ ಮಧ್ಯದಲ್ಲಿ ಕೊಯಮುತ್ತೂರಿನಲ್ಲಿ ನಡೆದ ಒಂದು ವಿಚಿತ್ರಗಿನಲ್ಲಿ ಇಂಡಿಯಾ ದೇಶದ ಮೂಖ್ಯ ಆಹಾರ ಮತ್ತು ವ್ಯವಸಾಯ ಮಂತ್ರಿ ಶ್ರೀ. ಕೆ. ಯಂ. ಮುನ್ಶಿಯವರು ಮತ್ತು ಅನೇಕ ವಿಜ್ಞಾನ ಶಾಸ್ತ್ರಜ್ಞರು ಈ ವಿಷಯವನ್ನು ಪರೀಕ್ಷಿಸಿ ಶ್ರೀ. ಗೌಡರವರು ಹೇಳಿದ ಮಾತು ನಿಜವೆಂದು ಒಪ್ಪಿದ್ದಾರೆ. ಅಲ್ಲದೆ ಶ್ರೀ ಗೌಡರವರಿಗೆ ಒಂದು ಪದಕವನ್ನು ಬೇರೊಂದು ಇನಾಮನ್ನೂ ಸಹ ಬಹುಮಾನವಾಗಿ ಕೊಟ್ಟರು. ಈ ಸಂದರ್ಭದಲ್ಲಿ ಶ್ರೀ. ಗೌಡರವರು ಮಾತನಾಡುತ್ತಾ ತಾನು ಇಷ್ಟು ಭತ್ತ ಬೆಳೆಸಬೇಕಾದರೆ ೨೦ವರ್ಷಗಳಿಂದ ಎಡೆಬಿಡದೆ ಹುಡಿಯುತ್ತಿದ್ದೇನಾಗಿಯೂ, ವ್ಯವಸಾಯ ಇಲಾಖೆಯವರು ಕೊಟ್ಟಂತಹ ಎಲ್ಲಾ ಸೂಚನೆಗಳನ್ನು ಅಕ್ಷರಕ್ಷರ ನಡೆಸಿಕೊಂಡು ಬರುತ್ತೇನೆಯೂಗಿಯೂ, ಒಳ್ಳೆಯ ವ್ಯವಸಾಯ ಮಾಡಲು ಕಂಪೋಸ್ಟ್ ಗೊಬ್ಬರ, ಹಸುರೆಲೆ ಗೊಬ್ಬರ, ದನದ ಗೊಬ್ಬರ ಮತ್ತು ಸೀಮೆ ಗೊಬ್ಬರ ಸಹ ಹಾಕಬೇಕೆಂದೂ, ತಾನು ಬೆಳೆಸಿದ ಪರಿಣಾಮದಷ್ಟು ಭತ್ತ ಬೆಳೆಸಲು ಇತರರಿಗೆ ಸಾಧ್ಯವಿದೆಯೆಂದೂ, ಜನರು ಊಹಿಸುವಂತೆ ತನಗೆ ಉತ್ಪತ್ತಿಗಿಂತ ಹೆಚ್ಚು ಖರ್ಚು ಆಗಿರುವುದಿಲ್ಲವೆಂದೂ ಹೇಳಿದರು. ಅಲ್ಲದೆ ಆವರ ಖರ್ಚು ಮತ್ತು ಉತ್ಪತ್ತಿಯ ಪಟ್ಟಿಯನ್ನು ಸಹ ಮುಂದಿಟ್ಟರು ಈ ಪಟ್ಟಿಯ ಪ್ರಕಾರ ಶ್ರೀಯುತರಿಗೆ ಒಂದು ಏಕರೆ ಭತ್ತ ವ್ಯವಸಾಯ ಮಾಡಲಿಕ್ಕೆ ರೂ. ೪೭೩|-೪ ಖರ್ಚು ತಗಲಿದೆ. ಅದೇ ಒಂದು ಏಕರೆ ಯ ಉತ್ಪತ್ತಿಯು ೧೬೦೦ ರೂಪಾಯಿಯಾಗಿ ಕಂಡು ಬಂದಿದೆ. ಅಂದರೆ ಶ್ರೀ ಗೌಡರವರು ಒಂದು ಏಕರೆ ಗದ್ದೆ ವ್ಯವಸಾಯದಿಂದ ರೂ. ೧,೧೨೬-೧೨-೦ ಲಾಭ ಪಡೆದಂತೆ ಕಂಡು ಬಂದಿದೆ.

ಶ್ರೀ ಗೌಂಡರ್‌ರವರ ಖರ್ಚು ಮತ್ತು ಉತ್ಪತ್ತಿಯ ಪಟ್ಟಿ ಈ ರೀತಿ ಇದೆ.

ಉಳುವ, ಗದ್ದೆ ಮಟ್ಟ ಮಾಡುವ ಮತ್ತು ಕದಂದನ್ನ ಶದ್ದ ಮಾಡುವ ಒಟ್ಟು ಖರ್ಚ	43-0-0
ಸೊಪ್ಪು ಗೊಬ್ಬರ, ಕಂಪೋಸ್ಟ್ ಗೊಬ್ಬರ, ದನದ ಗೊಬ್ಬರ, ಮೂಳೆಗೊಬ್ಬರ, ಅಮೋನಿಯಾಸಲ್ಫೇಟು ಮತ್ತು ವಿ ಶ್ರಗೊಬ್ಬರಗಳ ಕ್ರಯ	193-0-0
ಗೊಬ್ಬರ ಹಾಕಲು ಚಾರ್ಜು	74-0-0
ಬೀಜದಕ್ರಯ ಮತ್ತು ಪೈರು ತಯಾರಿ ಖರ್ಚು	12-0-0
ನಾಟಿ ಹಾಕಲು ಆಳುಗಳ ಕೂಲಿ	12-0-0
ಕಳೆ ತೆಗೆಯಲು ಆಳುಗಳ ಕೂಲಿ	12-8-0
ಬೆಳೆ ಕುಯ್ಯಲು, ಒಕ್ಕಲು ಹಾಕಲು ಆಳುಗಳ ಕೂಲಿ	120-0-0
ಭೂಮಿ ಕಂದಾಯ	6-12-0
ಜುಮ್ಲಾ ಖರ್ಚು	473-4-0
ಉತ್ಪತ್ತಿ	1,600-0-0
ನಿವ್ವಳ ಲಾಭ	1,126-12-0

ಶ್ರೀ ಗೌಂಡರ್‌ರವರು ನಾಟಿ ನೆಡುವಾಗ ಒಂದೊಂದೇ ಕಳೆಯನ್ನು ಒಂದೊಂದು ಆಡಿ ದೂರಧಲ್ಲಿ ನೆಟ್ಟಿದ್ದರೆಂದು ತಿಳಿಸಿದರು

ಶ್ರೀ ಗೌಂಡರ್‌ರವರು ಒಂದು ಏಕರೆ ನಲ್ಲಿ ಒಂದು ನೂರು ಬಟ್ಟ ಬತ್ತವನ್ನು ಬೆಳೆಸಿರುವಾಗ ನಮ್ಮಲ್ಲಿ ಹವಾಗುಣ ಸರಿಯಾಗಿದ್ದು, ಗದ್ದೆ ಫಲವತ್ತಾಗಿದ್ದು, ಸರಿಯಾದ ವ್ಯವಸಾಯ ಕ್ರಮವನ್ನು ಅನುಸರಿಸಿದ್ದೇ ಆದರೆ ನಾವು ಸಹ ಅಷ್ಟೇ ಬತ್ತವನ್ನು ಬೆಳೆಸಲು ಯಾವ ಅಡಚಣೆ ಇರಲಾರದೆಂದು ನಂಬುತ್ತೇವೆ. ಒಂದು ವೇಳೆ ನಮಗೆ ಶ್ರೀ ಗೌಂಡರ್‌ರವರಷ್ಟು ಬೆಳೆಸಲು ಸಾಧ್ಯವಿಲ್ಲದಿದ್ದರೆ ಒಂದು ಬಟ್ಟೆ ಭೂಮಿಗೆ ಕಡಿಮೆ ಪಕ್ಷ ಒಂದೂವರೆ ಬಟ್ಟೆ ಬತ್ತವಾದರೂ ಬೆಳೆಸಲು ಸಾಧ್ಯವಿಡೆಯೆಂಬ ಭರವಸೆ ಇದೆ ಆದ್ದರಿಂದ ನಮ್ಮ ದೇಶದವರು ವ್ಯವಸಾಯ ಇಲಾಖೆಯವರಿಂದ ಸರ್ವ ಸಹಾಯವನ್ನು ಪಡೆದು ತಮ್ಮ ಅನುಭವವನ್ನೂ ಉಪಯೋಗಿಸಿ ಶ್ರೀ ಗೌಂಡರ್‌ರವರನ್ನು ಮಾದರಿಯಾಗಿಟ್ಟುಕೊಂಡು ಹೆಚ್ಚು ಬೆಳೆ ಬೆಳೆಸಬೇಕಾಗಿ ಈ ಮೂಲಕ ಕೇಳಿಕೊಳ್ಳಲಾಗಿದೆ.

— ಕೊಡಗು ಎಗ್ರಿಕಲ್ಚರಲ್ ಆಫೀಸರು.

ಸರ್ವೋದಯ ಸಮಾಜದ ದೃಷ್ಟಿ

ಲೇ:- ಶ್ರೀ ಬಿ. ಡಿ. ಗಣಪತಿ.

ಪ್ರೇಮದ ಆದರ್ಶ.

ಒಂದು ಮನೆಯಲ್ಲಿ ತಾಯಿ ಮತ್ತವಳ ಚಿಕ್ಕ ಮಗು ಇಬ್ಬರೇ ಇದ್ದಾರೆ. ಮನೆಯಲ್ಲಿ ಉಟಕ್ಕೇ ತೊಂದರೆಯಾಗಿದೆ ಮನೆಯಲ್ಲಿ ಕೇವಲ ಒಂದು ರೊಟ್ಟಿ ಇದೆ. ತಾಯಿಗೂ ಮಗುವಿಗೂ ಇಬ್ಬರಿಗೂ ಹಸಿವಾಗಿದೆ. ತಾಯಿ ರೊಟ್ಟಿಯನ್ನು ಮಗುವಿಗೆ ಕೊಡುತ್ತಾಳೆ. ತಾನು ಉಪವಾಸವಿದ್ದರೂ ಶಕ್ತಿ ಇರುವ ತನಕ ಮಗುವನ್ನು ಸಾಖ್ಯದಿಂದಿಡಲು ಪ್ರಯತ್ನಿಸುತ್ತಾಳೆ. ತಾಯಿಯು ಮಗುವಿಗಿಂತಾ ಶಕ್ತಿ ಇರುವವಳು. ಇಷ್ಟ ಪಟ್ಟರೆ ಮಗುವಿಗೆ ಕೊಡದೆ ತಾನೇ ರೊಟ್ಟಿಯನ್ನ ತಿನ್ನಬಹುದು. ಆದರೆ ಆಕೆ ಹಾಗೆ ಮಾಡಲಾರಳು. ಮಗುವಿನ ನಿರ್ಬಲತೆಯು ಮಗುವನ್ನು ಆಕೆ ಹೆಚ್ಚು ಪ್ರೇಮ ಹಾಗೂ ಜತನದಿಂದ ನೋಡುವಂತೆ ಪ್ರೇರೇಪಿಸುತ್ತದೆ. ಇದೆ ತತ್ವ ಮಾನವ ಸಮಾಜದಲ್ಲಿ ಕಾರ್ಯರಂಗಕ್ಕಿಳಿಯುವುದಾದರೆ ನಿರ್ಬಲರಾದ ಬಡವರಿಗಾಗಿ ಧನಿಕರೂ, ಏನೂ ತಿಳಿಯದ ಅವಿದ್ಯಾವಂತರಿಗಾಗಿ ವಿದ್ಯಾವಂತರೂ, ಮಾನಸಿಕ ಹಾಗೂ ಶಾರೀರಿಕ ಶಕ್ತಿ ಇಲ್ಲದವರಿಗಾಗಿ ಆ ಶಕ್ತಿ ಇರುವವರೂ ದುಡಿಯಬೇಕಾಗುವದು. ತಾಯಿ ಮಗುವನ್ನು ರಕ್ಷಿಸುವಾಗ, ಪೋಷಿಸುವಾಗ, ಅದರ ಸೇವೆ ಮಾಡುವಾಗ ಹೆಮ್ಮೆಯೆ ಸುಳಿವು ಅಲ್ಲಿಲ್ಲ. ಎಲ್ಲವೂ ಸೇವೆಗಾಗಿ, ನಿಷ್ಕಾಮ ಸೇವೆಯಿಂದ ದೊರೆಯುವ ಆ ಆತ್ಮಸಂತೋಷಕ್ಕಾಗಿ. ನೀರಿಯರಿಯದ, ಸಾಧಕ ಬಾಧಕಗಳನ್ನು ತಾಗಿ ನೋಡದ ಆ ಅನನ್ಯ ಪ್ರೇಮಕ್ಕಾಗಿ! ಮಾತೆಯ ಈ ಆದರ್ಶವನ್ನು ಮುಂದಿಟ್ಟುಕೊಂಡು ಆ ರೀತಿಯಲ್ಲಿ ಶಕ್ತಿವಂತರು ನಿರ್ಬಲರನ್ನೂ, ಧನಾಢ್ಯರು ಬಡವರನ್ನೂ, ಜ್ಞಾನಿಗಳು ಅವಿದ್ಯಾವಂತರನ್ನೂ ಮೇಲೆತ್ತಲೆತ್ನಿಸಿದರೆ ಅದೇ ಉದಾತ್ತವಾದ ಸರ್ವೋದಯ ಮಾರ್ಗ.

ನಮ್ಮ ಇಂದಿನ ಸಮಾಜದಲ್ಲಿರುವ ಕೆಲವು ವಿಚಾರಗಳನ್ನು ತೆಗೆದುಕೊಂಡು ಸರ್ವೋದಯ ತತ್ವದಂತೆ ಅವುಗಳ ಪರಿವರ್ತನೆ ಹೇಗಾಗಬೇಕೆಂದು ಪರಿಶೀಲಿಸುವಾ.

ದುಡಿಯುವ ಮತ್ತು ದುಡಿಸಿಕೊಳ್ಳುವವ.

ಪ್ರಪಂಚದ ಇಂದಿನ ಹಲವು ಸಮಸ್ಯೆಗಳಿಗೆ ಇವರಿಬ್ಬರೊಳಗಿನ ಸಂಬಂಧವು ಸೂತ್ರವೂ, ಪ್ರೇಮಪೂರಿತವೂ ಆಗಿಲ್ಲದಿರುವದೇ ಕಾರಣ. ಇಂದಿನ ಪರಿಸ್ಥಿತಿಯಲ್ಲಿ ಪರಸ್ಪರರಲ್ಲಿ ಅವಿಶ್ವಾಸವು ತುಂಬಿ ಒಬ್ಬರನ್ನು ಮತ್ತೊಬ್ಬರು ಸುಲಿಗೆ ಮಾಡುವದನ್ನೇ ಗುರಿಯಾಗಿಟ್ಟುಕೊಂಡು ವರ್ತಿಸುವ ಪರಿಪಾಠಿಯಾಗಿದೆ. ಕೆಲಸ ಮಾಡುವವನು ಸಾಕಷ್ಟು ಕೆಲಸ ಮಾಡದೆ ವೇತನ ಹೊಡೆಯುಬೇಕೆಂದು ಬಯಸಿದರೆ, ಕೆಲಸ ಮಾಡಿಸುವವನು ಕಡಿಮೆ ವೇತನ ಕೊಟ್ಟು ತುಂಬಾ ದುಡಿಸಿಕೊಳ್ಳಬೇಕೆಂದು ಬಯಸುವನು. ಈ ಪರಸ್ಪರ ಶೋಷಣೆಯ ದೃಷ್ಟಿ ಬದಲಾಗಬೇಕು. ಕೆಲಸ ಮಾಡಿಸುವವನಲ್ಲಿಯೂ, ಕೆಲಸ ಮಾಡುವವನಲ್ಲಿಯೂ ಬೇಧವಿಲ್ಲ; ಒಬ್ಬನು ಧನಿಕ ಮತ್ತೊಬ್ಬನು ಬಡವನಲ್ಲ; ಇಲ್ಲವೇ ಒಬ್ಬನು ಯಜಮಾನ ಮತ್ತೊಬ್ಬನು ಸೇವಕನಲ್ಲ. ಒಬ್ಬನು ಮೇಲು ಮತ್ತೊಬ್ಬನು ಕೀಳಲ್ಲ. ಒಬ್ಬನಲ್ಲಿ ಹಣವೆಂಬ ಬಂಡವಾಳವಿದ್ದರೆ ಇನ್ನೊಬ್ಬನಲ್ಲಿ ಶ್ರಮಿಸುವ ಶಕ್ತಿಯು ಆ ಬಂಡವಾಳವಿದೆ. ಆದ್ದರಿಂದ ದುಡಿಸಿಕೊಳ್ಳುವವನು ದುಡಿಯುವವನ ಹಿತಾಹಿತಗಳನ್ನು ನೋಡಬೇಕು. ದುಡಿಸಿಕೊಳ್ಳುವವನಿಂದ ತಾನು ಪಡೆಯುವ ಸೌಕರ್ಯಕ್ಕೆ ಪ್ರತಿಯಾಗಿ ದುಡಿಯುವವನು ನ್ಯಾಯದೃಷ್ಟಿಯಿಂದ ಶ್ರಮಿಸಬೇಕು. ದುಡಿಯುವವನು ದಿನಕ್ಕೆ ಐದು ರೂಪಾಯಿಗಳ ಕೆಲಸ ಮಾಡಿದರೂ ದುಡಿಸಿಕೊಳ್ಳುವವನು ಒಂದು ರೂಪಾಯಿಯು ವೇತನ ಕೊಟ್ಟರೆ ದುಡಿಯುವನನ ಸುಲಿಗೆ ಮಾಡಿದಂತಾಗುವದು. ದುಡಿಸಿಕೊಳ್ಳುವವನಿಂದ ಒಂದು ರೂಪಾಯಿ ವೇತನ ಪಡೆದು ಕೇವಲ ಎಂಟಾಣೆಗನ್ನುರೂಪವಾಗಿ ದುಡಿದರೆ ದುಡಿಯುವವನು ದುಡಿಸುವವನ ಸುಲಿಗೆ ಮಾಡಿದಂತಾಗುವದು. ದುಡಿಸುವವನು ಅಪಾರ ಲಾಭ ಪಡೆಯುತ್ತಿದ್ದರೆ ದುಡಿಯುವವನು ತನ್ನ ಅನುಕೂಲತೆಗೆ ಪಾಲು ಬೇಡುವದು ಅದಕ್ಕಾಗಿ ಮುಷ್ಕರ ಹೂಡುವದು ಅಪರಾಧವಾಗದು. ಆದರೆ ಲಾಭವಿಲ್ಲದೆ ತನ್ನ ಯಂತ್ರ ಸಾಮಗ್ರಿಗಳನ್ನೇ ದುರಸ್ತಿಗೊಳಿಸುವದು ದುಡಿಸಿಕೊಳ್ಳುವವನಿಗೆ ಅಸಾಧ್ಯವಾಗಿರುವಾಗ ಹೆಚ್ಚಿನ ಬೇಡಿಕೆಗಳನ್ನು ಮುಂದಿಡುವದೂ, ಮುಷ್ಕರ ಹೂಡುವದೂ ಧರ್ಮವಾಗದು. ದುಡಿಸುವವ ಹಾಗೂ ದುಡಿಯುವವರೊಳಗಿನ ಈ ರೀತಿಯ ಸೌಹಾರ್ದಭಾವವೇ ಸರ್ವೋದಯದ ಗುರಿ. ಸತ್ಯ, ನೀತಿಗಳ ತಳಹದಿಯಲ್ಲಿ ನಿಂತ ಈ ಮಾರ್ಗವೇ ರಾಷ್ಟ್ರದ ಪ್ರಗತಿಗೂ ಜನತೆಯ ಸೌಖ್ಯಕ್ಕೂ ತಳಹದಿ. ಏಕೆಂದರೆ ಒಬ್ಬರನ್ನು ಮತ್ತೊಬ್ಬರು ಸುಲಿಗೆ ಮಾಡಿ ಯಾ ಒಬ್ಬರನ್ನೊಬ್ಬರು ಶಿಕ್ಷಿಸಿ ಯಾ ವಂಚಿಸಿ ಇಲ್ಲವೇ ಬಲಾತ್ಕಾರದ ಮಾರ್ಗದಿಂದ ಕೆಲಸ ಮಾಡಿಸಲಾಗುವದಿಲ್ಲ.

ದೇಶ ಸೈನಿಕ

ಹಿಂಸೆಯನ್ನು ನಾವು ಯಾವಾಗಲೂ ವಿರೋಧಿಸುತ್ತೇವೆ. ರಕ್ತ ಚೆಲ್ಲುವಹರನ್ನು ರಾಕ್ಷಸರೆನ್ನುತ್ತೇವೆ. ಆದರೆ ಸೈನಿಕನೆನ್ನುವವನ ಪ್ರಾಮುಖ್ಯ ಕೆಲಸ ಇನ್ನೊಬ್ಬನ ರಕ್ತ ಚೆಲ್ಲುವದೇ ಆಗಿದೆ. ಆತನು ಹಿಂಸಾವೃತ್ತಿಯವನಾದರೂ ಆತನನ್ನು ಮೆಚ್ಚುತ್ತೇವೆ. ವೀರನೆನ್ನುತ್ತೇವೆ. ಗೌರವಿಸುತ್ತೇವೆ. ಏಕೆ? ಸೈನಿಕನು ಯಾವುದೇ ಕ್ಷಣದಲ್ಲಿ ತನ್ನ ದೇಶಕ್ಕಾಗಿ ಪ್ರಾಣ ಕೊಡಲು ತಯಾರಿದ್ದಾನೆ. ತನ್ನ ಸ್ವಾರ್ಥ ಸುಖ, ಕಲ್ಯಾಣಗಳನ್ನು ಬದಿಗೊತ್ತಿ ರಣರಂಗಕ್ಕೆ ನಡೆಯಲು ತಯಾರಿದ್ದಾನೆ. ಈ ತ್ಯಾಗಕ್ಕಾಗಿ ಆತನಿಗೆ ಗೌರವ. ಆತನು ನೀತಿ ನಡತೆ ಇಲ್ಲದವನಿರಬಹುದು. ಹೊಟ್ಟೆಯ ಪಾಡಿಗಾಗಿ ಆ ವೃತ್ತಿಯನ್ನೆನು ಸ್ವೀಕರಿಸಿರಬಹುದು. ಆದರೂ ಕರೆ ಬಂದಾಗ ಈ ಜಗತ್ತಿನ ಭೋಗ ಭಾಗ್ಯಗಳನ್ನು ಬಿಟ್ಟು, ಪ್ರಾಣದ ಮಮತೆಯನ್ನು ತೊರೆದು ಹೋರಾಡುವ ಆತನ ಆ ಮನೋವೃತ್ತಿಗಾಗಿ ಕೊಂಡಾಡುವೆವು ಹಿಂಸಾ ಮಾರ್ಗದ ಈ ಸೈನಿಕನ ತ್ಯಾಗಕ್ಕಾಗಿ ಆತನ ದೇಶಪ್ರೇಮಕ್ಕಾಗಿ ನಾವು ಆತನನ್ನು ಕೊಂಡಾಡುತ್ತಿರುವಾಗ ಅಹಿಂಸಾ ಮಾರ್ಗದ ಸೈನಿಕನ ಖ್ಯಾತಿಗೆ ಎಣೆ ಇರದು. ಇನ್ನೊಬ್ಬರ ಸುಲಿಗೆ ಮಾಡದೆ ತನ್ನ ದುಡಿಮೆಯು ಬಲದಲ್ಲಿ ಜೀವಿಸಿ, ಸತ್ಯ ನೀತಿ ನಡತೆಯಲ್ಲಿ ಬದುಕುವ ವ್ಯಕ್ತಿಯೆಂದನಾರ್ಹನು. ಆತನು ಇನ್ನೊಬ್ಬನ ಕೊಲೆ ಮಾಡಲಾರನು. ಆವಶ್ಯ ಬಿದ್ದಾಗ ತನ್ನ ಪ್ರಾಣವನ್ನರ್ಪಿಸಲು ತಯಾರಿರುವನು. ಇನ್ನೊಬ್ಬರ ದುಃಖಕ್ಕಾಗಿ ತಾನೂ ಪರಿತಪಿಸುವನು. ಇತರರಿಗೆ ನೆರವಾಗುವದೇ ಜೀವನದ ಗುರಿ ಎನ್ನುವನು. ಇಂಥಾ ದೇಶ ಸೈನಿಕರ ತಂಡವೇ ಸರ್ವೋದಯದ ಗುರಿ. ಮಹಾತ್ಮಾಗಾಂಧಿಯವರಂಥಾ ದೇಶ ಸೈನಿಕರನ್ನು ನಿರ್ಮಿಸುವ ಸಾಧನೆಯೇ ಇದು. ನೂರಾರು ದಿನ ಯುಗಾಂತರಗಳ ವರೆಗೆ ಅಂಥಾ ಒಬ್ಬ ಸೈನಿಕನನ್ನು ತಯಾರಿಸುವದು ಸರ್ವೋದಯ ಚಳವಳಿಕ್ಕೆ ಸಾಧ್ಯವಿಲ್ಲದಿರಬಹುದು. ಆದರೆ ಆ ಪ್ರಯತ್ನವೇ ಶುದ್ಧಿಯ ಮಾರ್ಗ. ಕಬ್ಬಿಣ ಚಿನ್ನವಾಗಲಾರದಾದರೂ ಸತತ ಪ್ರಯೋಗ ಘರ್ಷಣೆಗಳಿಂದ ಅಂಟಿದ್ದ ಕೊಳೆಯನ್ನಾದರೂ ತೊಳೆದುಕೊಂಡು ಪರಿಶುದ್ಧವಾಗ ಬಲ್ಲುದಲ್ಲವೇ?

ಸೇವಾ ಮಾರ್ಗ.

ಧರ್ಮ ಸಮಾಜದಲ್ಲಿ ವಕೀಲರು ವೈದ್ಯರು, ಅಧಿಕಾರಿಗಳು, ವ್ಯಾಪಾರಿಗಳು ಮೊದಲಾದವರು ಇದ್ದಾರೆ. ಪ್ರತಿಯೊಬ್ಬನು ಕೈಕೊಂಡಿರುವ ಆಯಾ ಉದ್ಯಮಗಳು ಆವರವರ ಜೀವನ ಮಾರ್ಗವೆಂದು ಹೇಳಬೇಕಾಗಿದೆ. ಇದರಲ್ಲಿ ತಪ್ಪಿಲ್ಲ. ಈ ಜೀವನ ಮಾರ್ಗವೇ ಸೇವಾ ಮಾರ್ಗವೂ ಹೌದೆಂದೂ, ನ್ಯಾಯ ಸಮ್ಮತ ರೀತಿಯಿಂದ ತನ್ನ ಜೀವನಕ್ಕೆ ಬೇಕಾದುದನ್ನು ಹೊಂದಿಕೊಂಡು ಅದಕ್ಕೆ ಅನುರೂಪವಾದ ಸೇವೆಯನ್ನು ಪ್ರತಿಯೊಬ್ಬನು ಸಲ್ಲಿಸಬೇಕೆಂಬುದೇ ಸರ್ವೋದಯದ ಆಸೆ. ಈ ಜೀವನ ಮಾರ್ಗವೇ ಸೇವಾ ಮಾರ್ಗವೆಂಬುವುದನ್ನು ಬಿಟ್ಟು ಅದನ್ನು ಲಾಭದ ಮಾರ್ಗವಾಗಿ, ಸ್ವಾರ್ಥ ಸಾಧನೆಯ ಮಾರ್ಗವಾಗಿ ಪರಿವರ್ತಿಸಿದರೆ ಅದರಿಂದ ಸರ್ವನಾಶವಾಗದಿರದು. ವಕೀಲನು ದುಡ್ಡಿನ ಆಸೆಯಿಂದ ಅನ್ಯಾಯವನ್ನು ನ್ಯಾಯವೆಂದು ಸಾಧಿಸಿದರೆ ಆತನು ತನ್ನ ವೃತ್ತಿಯ ವ್ಯಭಿಚಾರ ಮಾಡಿದಂತೆ! ನ್ಯಾಯಾಧೀಶನು ಲಂಚಕ್ಕೋ ಬೇರಾವುದಕ್ಕೋ ವಶಳಾಗಿ ನ್ಯಾಯವನ್ನು ಅನ್ಯಾಯವೆಂದು ಸಾರಿದರೆ ಅದು ಅನೀತಿಯೆನಿಸುವದು. ಅಧಿಕಾರಿಯು ಜವರ ಸೇವಕನಾಗದೆ ಅವರ ಸುಲಿಗೆದಾರನಾಗಿ ಅಧಿಕಾರ ಚಲಾಯಿಸಿದರೆ, ವೈದ್ಯನು ರೋಗಿಯನ್ನು ತನ್ನ ಸಂಪಾದನೆಯ ಸಾಧನವನಾಗಿ ಉಪಯೋಗಿಸಿ ಆತನನ್ನು ನರಳಿಸಿದರೆ ಅದು ಔದ್ಯೋಗಿಕ ವ್ಯಭಿಚಾರವೆನಿಸುವದು.

ವ್ಯಾಪಾರಿಗೆ ಇಂದು ಸಮಾಜದಲ್ಲಿ ಹೆಚ್ಚಿನ ಗೌರವವಿಲ್ಲ ನಮ್ಮ ಸಮಾಜವು ಇಂದು ದುಡ್ಡಿನ ಪೂಜೆಯೇ ದೇವರ ಪೂಜೆಗಿಂಥಾ ಮಿಗಿಲೆಂದು ಭಾವಿಸಿದ್ದರೂ, ದುಡ್ಡಿರುವವನೇ ದೊಡ್ಡವನೆಂಬ ಆಳತೆಗೋಲನ್ನು ಹಿಡಿದು ವರ್ತಿಸುತ್ತಿದ್ದರೂ ನ್ಯಾಯ ನೀತಿಗೆ ಶಿರಬಾಗುವದೆಂಬುದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು. ನಮ್ಮ ಸಮಾಜವು ವ್ಯಾಪಾರಿಗೆ ಇಂದು ಹೆಚ್ಚಿನ ಗೌರವ ಕೊಡುತ್ತಿಲ್ಲ. ಆದರಲ್ಲೂ ವ್ಯಾಪಾರವೆಂಬ ಉದ್ಯಮವನ್ನು ಸ್ವಾರ್ಥಲಾಭದ ಹಾಗೂ ದುಡ್ಡುಗಳಿಸುವ ಮಾರ್ಗವಾಗಿ ಉಪಯೋಗಿಸಿಕೊಂಡು ಕಳ್ಳ ಮಾರಾಟ, ಲಾಭ ಬಡಕತನಗಳಿಗೆ ಬಲಿಬಿದ್ದವರನ್ನು ದೇಶ ದ್ರೋಹಿಗಳೆಂದು ಪರಿಗಣಿಸುತ್ತದೆ. ವ್ಯಾಪಾರಿಯು ಯಾವಾಗಲೂ ಸ್ವಾರ್ಥತೆಯಿಂದ ದುಡಿಯುವನೆಂದು ಸ್ವಯಂ ಸಿದ್ಧವಾಗಿದೆ. ಆತನಲ್ಲಿ ಮಾನವತೆಯು ಲುಪ್ತವಾಗಿ ಹೋಗಿದೆ. ನಿಮ್ಮಿಂದ ಆತನಿಗೆ ಲಾಭವಿದ್ದರೆ ಮಾತ್ರ ಆತನಲ್ಲಿ ಸ್ನೇಹದ ಮಾತು ಹಾಗೂ ಹಾರ್ದಿಕವರ್ತನೆಯನ್ನು ನೀವು ಕಾಣುವಿರಿ. ಇಲ್ಲದಿದ್ದರೆ ಮಾತು ಕೂಡ ಆಡನು. ಆತನಿಗೆ ಸ್ನೇಹಿತ, ಬಂಧು ಬಳಗವೆಂದು ಕೂಡ ಇಲ್ಲ. ಆತನ ಗುರಿ ಹಣಗಳಿಸುವದು. ಅದಕ್ಕಾಗಿ ಅಣ್ಣ ತಮ್ಮಂದಿಯರನ್ನು ಆತನು ಸುಲಿಗೆ ಮಾಡಲು ಹಿಂಜರಿಯನು.

'ಕೊಟ್ಟದ್ದು ತನಗೆ'

'ಕೊಟ್ಟದ್ದು ತನಗೆ ಬೈಚಿಟ್ಟದ್ದು ಪರರಿಗೆ' ಎಂಬ ಸರ್ವಜ್ಞನ ವಚನದಂತೆ ಜಗತ್ತಿನ ಜೀವ ಜೀವಾಳ ತ್ಯಾಗದಲ್ಲಿದೆಯೆಂಬುದನ್ನು ಸರ್ವೋದಯ ಸಾರುತ್ತಿದೆ. ಇನ್ನೊಬ್ಬನನ್ನು ತನ್ನಂತೆ ಕಂಡು ಆತನ ಹಿತವೇ ತನ್ನ ಹಿತವೆಂದು ಸಾಧಿಸಹೇಳುವ ಮಾರ್ಗವೇ ಸರ್ವೋದಯದ ಮಾರ್ಗ. ಅಲ್ಲಿ ಮೇಲು ಕೀಳಿಲ್ಲ; ಧನಿಕ ಬಡವರಿಲ್ಲ; ಗರ್ವ ಅಹಂಕಾರಗಳಿಲ್ಲ. ಪರಸ್ಪರ ಪ್ರೇಮ ಋಣಾನುಬಂಧದಿಂದ ಬಂಧಿಸಲ್ಪಟ್ಟ ಈ ಸಮಾಜದಲ್ಲಿ ಸರ್ವರೂ ಸರ್ವರಿಗಾಗಿ ದುಡಿಯುವವರು. ಸರ್ವರ ಹಿತದಲ್ಲಿ ತನ್ನ ಹಿತವೂ ಅಡಗಿದೆಯೆಂದು ಭಾವಿಸುವವರು. ಹಡಗು ಮುಳುಗುತ್ತಿರುವಾಗ ಕಪ್ತಾನನು ಹಡಗಿನ ಇತರರೆಲ್ಲರನ್ನು ದಡ ಸೇರಿಸಿ ಹಿಂದೆ ತಾನು ಬರುವಂತೆ ಮುಂದಾಳೆನಿಸಿದವನು ಇತರರ ಹಿತ ಚಿಂತನೆಯನ್ನು ಮೊದಲು ಮಾಡಬೇಕು. ತನ್ನ ಮಗುವನ್ನು ರಕ್ಷಿಸಲು ಪ್ರಾಣವನ್ನು ಲೆಕ್ಕಿಸದ ಮಾತೆಯಂತೆ ತನ್ನಧೀನದಲ್ಲಿರುವವರಿಗಾಗಿ, ನೆರೆಯವರಿಗಾಗಿ ಅಸು ತೆರೆಯಲು ತಯಾರಿರಬೇಕು. ನಾವು ಚರಿತ್ರೆಯನ್ನು ನೋಡಿದರೆ ತನ್ನೊಬ್ಬ ಮಗನ ಪ್ರಾಣ ರಕ್ಷಣೆಗಾಗಿ ತನ್ನ ಪ್ರಾಣ ತೊರೆದ ಬಾಬರನ ತ್ಯಾಗವನ್ನು ನೆನೆದು ನಾವು ಆತನನ್ನು ಮೆಚ್ಚುತ್ತೇವೆ. ದೇಶಕ್ಕಾಗಿ ಪ್ರಾಣ ತೆತ್ತ ಭಗತ್ ಸಿಂಗ್, ನೇತಾಜಿ ಮೊದಲಾದವರನ್ನು ನೆನೆದು ಪುಳಕಿತರಾಗುತ್ತೇವೆ. ಇಡೀ ಮಾನವಕುಣಕ್ಕಾಗಿ, ಜಲಚರವಸು ನಿಕರಕ್ಕಾಗಿ ತನ್ನ ಕಾತುರತೆಯನ್ನು ತೋರಿ ಅವುಗಳೆಲ್ಲವುಗಳ ಹಿತಕ್ಕಾಗಿ ತನ್ನುವನ್ನು ತೇದುವಿನಿಯೋಗಿಸಿದ ಕ್ರಿಸ್ತ, ಬುದ್ಧ ಮಹಾತ್ಮಾಗಾಂಧಿ ಮೊದಲಾದವರನ್ನು ದೇವರ ಮಟ್ಟಕ್ಕೇರಿಸಿ ಆರಾಧಿಸುತ್ತೇವೆ. ಆದ್ದರಿಂದ ಪ್ರೇಮದಲ್ಲಿಯ ವಿವಿಧ ಅಂತಸ್ತುಗಳಿವೆ. ಮೇರಿಯುರಿಯದ ವಿಶಾಲ ಪ್ರೇಮವೇ ಸರ್ವೋದಯದ ಗುರಿ. ಸರ್ವೋದಯದ ಈ ವಿಶಾಲ ದೃಷ್ಟಿಯನ್ನು ನೋಡಿ ಇದು ಆಗದ ಕಾರ್ಯವೆಂದು ಯಾರೂ ಜಿಗುಪ್ಸೆ ಪಡದಿರಲಿ ನಾವು ಗುರಿಯನ್ನು ಮುಟ್ಟಲಿ ಯಾ ಮುಟ್ಟದಿರಲಿ, ನಮ್ಮ ಜೀವಿತ ಸಮಯದಲ್ಲಿ ಏನೇ ಬಂದರೂ ಈ ಪಥವನ್ನು ಬಿಡದೆ ನಮ್ಮ ಶಕ್ತಿಗನುಗುಣವಾಗಿ ಸಾಗಲು ಯತ್ನಿಸುವದರಲ್ಲೇ ಪುರುಷಾರ್ಥವಲ್ಲದೆ ಈ ಪಥವನ್ನು ಬಿಟ್ಟ ಮಾನವನ ಜೀವನಕ್ಕೆ ಬೇರೆ ಅರ್ಥ ಇರಲಾರದು.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟೆ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆಮಾಡುವ ಪಂಪುಗಳು (Spraying Pumps)
7. ¾" ½" ⅜" ¼" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಆವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52-52

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮುಖ್ಯ ಖಚೇರಿ:-ಹೊಸ ಡೆಲ್ಲಿ.

52-19 ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:--LIFE, FIRE, MOTOR and MARINE.

ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊತ್ತ	ರೂ.	1,99,400.
ಕ್ಷೇಮನಿಧಿ	ರೂ.	59,000.
ಇತರ ನಿಧಿಗಳು	ರೂ.	36,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದ

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಜೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಕೆ. ಪಿ. ಅಪ್ಪಯ್ಯ, M. L. C.
ಸಾ. ಕಾರ್ಯದರ್ಶಿ, ಪ್ರೆಸಿಡೆಂಟ್ ಮತ್ತು ಮ್ಯಾನೇಜ್.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ಅಮೇರಿಕೆಯಲ್ಲಿ

ಮಹಿಳೆಯರ ಪಾತ್ರ

೧೭೫ ವರ್ಷಗಳಿಂದ ಸ್ವತಂತ್ರ ರಾಷ್ಟ್ರವಾಗಿ ವಿರಾಜಿಸುತ್ತಿರುವ ಅಮೇರಿಕದ ರಾಷ್ಟ್ರೀಯ ಜೀವನದಲ್ಲಿ ಮಹಿಳೆಯರು ಇಂದು ಪ್ರಮುಖ ಪಾತ್ರ ವಹಿಸಿದ್ದಾರೆ. ಸದ್ಯದಲ್ಲಿಯೇ ಅಮೇರಿಕೆಯ ಮಹಿಳೆಯರು ತಮ್ಮ ಹಕ್ಕು-ಬಾಧ್ಯತೆಗಳನ್ನು ಗಳಿಸಿದ ದಿನದ ವಾರ್ಷಿಕೋತ್ಸವವನ್ನು ನೆರವೇರಿಸುವರು.

೧೯೨೦ ನೇ ಇಸ್ವಿ ಆಗಸ್ಟ್ ೨೬ ನೇ ತಾರೀಖಿನ ದಿನ ಅಮೇರಿಕೆಯ ರಾಜ್ಯಾಂಗಕ್ಕೆ ೧೯ ನೇ ತಿದ್ದುಪಡಿಯನ್ನು ಮಾಡಲಾಯಿತು. ಆ ತಿದ್ದುಪಡಿಯ ಪ್ರಕಾರ ಅಮೇರಿಕೆಯ ಎಲ್ಲಾ ವಯಸ್ಸಿಗೆ ಬಂದ ಮಹಿಳೆಯರಿಗೆ ಮತಾಧಿಕಾರ ಕೊಡಲು ನಿರ್ಧರಿಸಲಾಯಿತು.

ಸ್ತ್ರೀಯರಿಗೆ ಮತಾಧಿಕಾರ ಕೊಡುವ ಹಕ್ಕು ಕ್ರಮೇಣ ಹೋರಾಟದ ಫಲವಾಗಿ ಸ್ಥಾಪಿಸಲಾಯಿತು. ಹಳೆಯ ಕಂದಾಚಾರದ ಫಲವಾಗಿ ಇದ್ದ ಪದ್ಧತಿಯ ದೆಶೆಯಿಂದ ಸ್ತ್ರೀಯರು ರಾಜಕಾರಣದಲ್ಲಿ, ಆರ್ಥಿಕ ಜೀವನದಲ್ಲಿ ಮತ್ತು ವೃತ್ತಿಯನ್ನವಲಂಬಿಸುವುದರಲ್ಲಿ ಅವಕಾಶವಿರಲಿಲ್ಲ. ಅಮೇರಿಕೆಯ ಮಹಿಳೆಯರ ಸತತ ಹೋರಾಟದ ಫಲವಾಗಿ ಈ ಹಕ್ಕುಗಳು ಸ್ಥಾಪಿಸಲ್ಪಟ್ಟವು. ಬರೀ ಮತಾಧಿಕಾರವೇಕೆಂಬ ಉದ್ದೇಶದಿಂದ ಅಮೇರಿಕೆಯ ಮಹಿಳೆಯರು ಈ ಹೋರಾಟ ಪ್ರಾರಂಭಿಸಲಿಲ್ಲ. ಸಮಾಜದಲ್ಲಿ ಪುರುಷರೊಂದಿಗೆ ಸಮಾನ ಸ್ಥಾನಬೇಕೆಂಬ ಘನ ಉದ್ದೇಶದಿಂದ ಆ ಚಳುವಳಿಯನ್ನು ಹೂಡಿದ್ದರು. ಶತಮಾನಗಳಿಂದ ಗಂಡಸರೇ ಮಾಡಿಕೊಂಡು ಬರುತ್ತಿದ್ದ ಕೆಲಸಗಳನ್ನು ಹೆಂಗಸರು ಮಾಡಬಲ್ಲರು ಎಂಬ ಸಿದ್ಧಾಂತಕ್ಕೆ ಬರಲು ಬಲು ಕಷ್ಟವಾಯಿತು. ಮೊದ ಮೊದಲು ಈ ಚಳುವಳಿಗೆ ಜಯಸಿಕ್ಕದಿದ್ದರೂ ಪ್ರಯತ್ನಗಳು ನಡೆಯುತ್ತಲೇ ಇದ್ದವು.

ಮೇಲೆ ಮೇಲೆ ಮಹಿಳೆಯರಿಗೆ ಮತಾಧಿಕಾರಬೇಕೆಂಬ ಚಳುವಳಿಯು ಜೋರಿನಿಂದ ನಡೆಯುತ್ತಿದ್ದರೂ ನಿಜಕ್ಕೂ ಸ್ತ್ರೀಯರು ಗಂಡಸರೊಂದಿಗೆ ಜೊತೆಯೂಗಿ ವ್ಯಾಪಾರ ಮಾಡಲು, ವೃತ್ತಿಯನ್ನು ಕೈಗೊಳ್ಳಲು, ಗೌರವಯುತವಾದ ವಿವಿಧ ವಿನೋದಾವಳಿಗಳಲ್ಲಿ ಭಾಗವಹಿಸಲು, ಚಳುವಳಿ ನಡೆಯುತ್ತಿತ್ತು.

ಉತ್ತರ ಅಮೇರಿಕೆಯಲ್ಲಿ ಕಂದಾಚಾರ ಪದ್ಧತಿಗೆ ವಿರುದ್ಧವಾಗಿ ನಡೆಯುವುದು ತುಂಬಾ ಕಷ್ಟವಾಗಿದ್ದರೂ, ಅಲ್ಲಿಯ ನಿತ್ಯ ಜೀವನ ನಡೆಸಲು ಹೆಂಗಸರು, ಗಂಡಸರು ಜೊತೆ ಜೊತೆಯಾಗಿಯೇ ಕೆಲಸ ಮಾಡಬೇಕಾಗಿತ್ತು. ಈ ಪರಸ್ಪರ ಸಹಕಾರವೇ ಕ್ರಮೇಣ ಕಂದಾಚಾರ ಪದ್ಧತಿಯನ್ನು ಕಿತ್ತೊಗೆಯಿತು.

೧೯೨೦ ನೇ ಇಸ್ವಿಯ ವೇಳೆಗೆ ರಾಷ್ಟ್ರಾದ್ಯಂತವಾಗಿ ಮಹಿಳೆಯರಿಗೆ ಮತದಾನ ಅಧಿಕಾರ ಕೊಡಲಾಗಿದ್ದರೂ ೧೪ ರಲ್ಲಿ ಮೊದಲೇ ಗುಡ್ಡಗಾಡಿನ ಸಂಸ್ಥಾನವಾದ ವಯೋಮಿಂಗಿನಲ್ಲಿ ಈ ಹಕ್ಕು ಸ್ಥಾಪಿಸಲ್ಪಟ್ಟಿತ್ತು. ಬರುಬರುತ್ತಾ ಇತರ ಸಂಸ್ಥಾನಗಳಲ್ಲಿಯೂ ಈ ಹಕ್ಕು ಸ್ಥಾಪಿಸಲ್ಪಟ್ಟಿತು.

ರಾಜ್ಯಾಂಗಕ್ಕೆ ೧೯ನೇ ತಿದ್ದುಪಡಿಯೂದ ನಂತರ ಮಹಿಳೆಯರು ರಾಜಕೀಯದಲ್ಲಿ ಹೆಚ್ಚು ಭಾಗ ವಹಿಸಲು ಪ್ರಾರಂಭಿಸಿದರು. ಮೊದಲು, ಸ್ಥಳೀಯ ಸಂಸ್ಥೆಗಳಲ್ಲಿ ಭಾಗವಹಿಸುತ್ತಿದ್ದು, ೧೯೧೪ ರಲ್ಲಿ ಅಮೇರಿಕೆಯ ಪ್ರತಿನಿಧಿ ಸಭೆಯೂದ ಕಾಂಗ್ರೆಸಿಗೆ ಪ್ರಥನವಾಗಿ ಒಬ್ಬ ಮಹಿಳೆಯು ಆರಿಸಲ್ಪಟ್ಟಳು. ಇಂದು ಅಮೇರಿಕೆಯ ಪ್ರತಿನಿಧಿ ಸಭೆಯೂದ ಕೆಳಮನೆಯಲ್ಲಿ ೯ ಮಹಿಳೆಯರೂ, ಮೇಲ್ಮನೆಯಲ್ಲಿ ಒಬ್ಬರೂ ಇರುವರು.

೪೮ ಸಂಸ್ಥಾನಗಳ ಪೈಕಿ ೪೦ ಸಂಸ್ಥಾನಗಳ ಶಾಸನ ಸಭೆಗಳಲ್ಲಿ ೨೩೫ ಮಹಿಳಾ ಸದಸ್ಯರಿದ್ದಾರೆ. ೧೯೨೦ ರಲ್ಲಿ ಕೇವಲ ೨೯ ಜನ ಮಹಿಳೆಯರು ಮಾತ್ರವಿದ್ದರು

ಸರಕಾರದ ಆಡಳಿತ ಶಾಖೆಗಳಾದ ನ್ಯಾಯಾಂಗ ಮತ್ತ ಕಾರ್ಯಾಂಗದಲ್ಲಿ ಇಂದು ಅಮೇರಿಕೆಯ ಮಹಿಳೆಯರು ಹೆಚ್ಚು ಹೆಚ್ಚಾಗಿ ಕೆಲಸದಲ್ಲಿದ್ದಾರೆ. ಹೆಚ್ಚು ಗೌರವ ಸ್ಥಾನವಾದ ನ್ಯಾಯಾಧೀಶ ಪದವಿಯು, ಸ್ಥಳೀಯ ಸಂಸ್ಥಾನದ ಮತ್ತು ಸಂಯುಕ್ತ ಸರಕಾರಗಳಲ್ಲಿ ಕೊಡಲ್ಪಡುತ್ತಿದೆ. ಇತ್ತೀಚೆಗೆ ಪ್ರಮುಖ ಮಹಿಳೆಯರು ರಾಯಭಾರಿಗಳಾಗಿ, ಮಂತ್ರಿ ಮಂಡಳದ ಪ್ರಮುಖ ಅಧಿಕಾರಿಗಳಾಗಿ ಕೆಲಸ ಮಾಡಿ ಪ್ರಶಂಸೆ ಪಡೆದಿದ್ದಾರೆ. ಇಂದು ಅಮೇರಿಕೆಯ ಸಂಯುಕ್ತ ಸರಕಾರದಲ್ಲಿ ಶೇಕಡ ೨೫ ರಷ್ಟು ಮಹಿಳೆಯರು ಕೆಲಸದಲ್ಲಿದ್ದಾರೆ.

ಸಂಯುಕ್ತ ಸರಕಾರದಲ್ಲಿದ್ದಂತೆ, ಸಂಸ್ಥಾನಗಳಲ್ಲಿಯೂ ಕೂಡ, ಸ್ತ್ರೀಯರ ಪ್ರಾಬಲ್ಯ ಹೆಚ್ಚಾಗಿದೆ. ಚಳುವಳಿ ಪ್ರಾರಂಭವಾದ ಶತಮಾನದ ನಂತರ ಅಮೇರಿಕೆಯು ವಣಿಕ ಜೀವನದಲ್ಲಿ, ವೃತ್ತಿಗಳಲ್ಲಿ, ಶಾಲೆ ಕಾಲೇಜುಗಳಲ್ಲಿ, ಪ್ರತಿಯೊಂದು ಶಾಖೆಗಳಲ್ಲಿಯೂ ಲಕ್ಷಾಂತರ ಮಹಿಳೆಯರು ಕೆಲಸ ಮಾಡುತ್ತಿರುವುದನ್ನು ಇಂದು ನೋಡಬಹುದು.

ಇಂದಿನ ಮಹಿಳಾ ನಾಯಕರಿಗೆ, ಸ್ತ್ರೀಯರ ಅಭಿವೃದ್ಧಿಯ ಬಗ್ಗೆ ತೃಪ್ತಿಯುಂಟಾಗದಿದ್ದರೂ, ಇನ್ನೂ ಹೆಚ್ಚಿನ ಸೌಲಭ್ಯಗಳು ಬೇಕೆಂದು ಹೇಳುತ್ತಿದ್ದಾರೆ.

ಅಮೇರಿಕೆಯ ಅಧ್ಯಕ್ಷಪದವಿಗೆ ಎಂದು ಒಬ್ಬ ಮಹಿಳೆಯು ಬಂದು ಆ ಪದವಿಯನ್ನು ಅಲಂಕರಿಸುವಳೋ ಅಂದು ಮಹಿಳೆಯರ ಆಸೆಗಳು ಸಂಪೂರ್ಣವಾಗಿ ನೆರವೇರಿದಂತಾಗುವವು. ಅಲ್ಲಿಯ ವರೆಗೆ ಮಹಿಳೆಯರ ಮೇಲ್ಮೆಗಾಗಿ ಚಳುವಳಿ ನಡೆಯುತ್ತಲೇ ಇರುತ್ತವೆಂದು ಅವರ ನಾಯಕರು ಹೇಳುತ್ತಾರೆ ಇಂದಿನ ವರೆಗೆ ಅಮೇರಿಕೆಯಲ್ಲಿ ಮಹಿಳೆಯರು ತಮ್ಮ ಗುರಿಯನ್ನು ಬಹು ಮಟ್ಟಿಗೆ ಮುಟ್ಟಿದ್ದಾರೆಂದು ಹೇಳಬಹುದು.